2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ , ದಾವಣಗೆರೆ.

Spl.C.723/2023

ಫಿರ್ಯಾದಿದಾರರು	ವಿರುದ್ಧ	ಆರೋಪಿತರು
ರಾಜ್ಯದ ಪರವಾಗಿ ಹರಿಹರ ನಗರ ಪೊಲೀಸ್ ಠಾಣೆ, ಹರಿಹರ.		ಎ 1) ವಿನಯಕುಮಾರ.ಕೆ.ಎನ್. ಮತ್ತು ಇತರರು

ದೋಷಾರೋಪಣೆ

ನಾನು ಶ್ರೀ. ಪ್ರವೀಣ್ ಕುಮಾರ್.ಆರ್.ಎನ್., ಬಿ.ಕಾಂ. ಎಲ್.ಎಲ್.ಬಿ, 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು , ದಾವಣಗೆರೆ :-

ಆರೋಪಿತರಾದ- 1 ಎ 1) ವಿನಯಕುಮಾರ.ಕೆ.ಎನ್. ತಂದೆ ಕೆ.ಹೆಚ್.ಮೋಹನ್, ವಯಸ್ಸು 42 ವರ್ಷ,

2 ಎ 2) ರತ್ನಮ್ಮ ಕೋಂ ಕೆ.ಹೆಚ್.ಮೋಹನ, ವಯಸ್ಸು 62 ವರ್ಷ, ಇಬ್ಬರೂ ವಾಸಃ ವಿದ್ಯಾನಗರ, ಎ ಬ್ಲಾಕ್, ಚಂದ್ರಗಿರಿ ನಿಲಯ, ಹರಿಹರ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.

3 ಎ 3) ಬಸಮ್ಮ ಯಾನೆ ನೀಲಮ್ಮ ಕೋಂ ಲಕ್ಷ್ಮಣ ಅರಳಿಕಟ್ಟೆ, ವಯಸ್ಸು 72 ವರ್ಷ, ವಾಸಃ ಕೆಎಸ್ ಆರ್ ಟಿ ಸಿ ಬಸ್ಯ್ಟಾಂಡ್ ಎದುರು, ಬಿಎಸ್ ರಸ್ತೆ, ರಾಣೆ ಬೆನ್ನೂರು ಟೌನ್, ಹಾವೇರಿ ಜಿಲ್ಲೆ.

ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪವಿಡುತ್ತೇನೆ.

1. ಮೊದಲನೇಯದಾಗಿ, 1 ನೇ ಆರೋಪಿತನಾದ ನೀನು ಸಾಕ್ಷಿ-1 ರವರನ್ನು ಪ್ರೀತಿಸಿ ಮದುವೆಯಾಗಿದ್ದು, ಮದುವೆಯ ಸಮಯದಲ್ಲಿ 1 ಮತ್ತು 2 ನೇ ಆರೋಪಿತರು ಖಚಿರ್ಗಾಗಿ ವರದಕ್ಷಿಣೆ ಬೇಡಿಕೆ ಇಟ್ಟಿದ್ದು, ಆ ಪ್ರಕಾರ ಸಾಕ್ಷಿ-8 ರವರು 2 ಲಕ್ಷ ರೂಪಾಯಿ ಹಣವನ್ನು ನಿಮ್ಮಲ್ಲಿ 2 ನೇ ಆರೋಪಿಗೆ ನೀಡಿದ್ದು, ಆ ಪ್ರಕಾರ ಕಲಂ 3 ವರದಕ್ಷಿಣೆ ನಿಶೇಧ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

2. ಎರಡನೇಯದಾಗಿ, ಮದುವೆಯಾದ ಬಳಿಕ ಸಾಕ್ಷಿ-1 ರವರು 1 ಮತ್ತು 2 ನೇ ಆರೋಪಿತರ ಜೊತೆ ಇರುವ ಸಂದರ್ಭದಲ್ಲಿ ಆರೋಪಿತರಾದ ನೀವೆಲ್ಲರೂ ಆಕೆಗೆ ಕೀಳು ಜಾತಿಯವಳು ಎಂದು ಜಾತಿ ನಿಂದನೆ ಮಾಡುತ್ತ ಚುಚ್ಚು ಮಾತುಗಳನ್ನಾಡಿ, ಅವಮಾನ ಮಾಡುತ್ತಿದ್ದುದಲ್ಲದೇ, ನಿಮ್ಮಲ್ಲಿ 1 ನೇ ಆರೋಪಿತನಾದ ನೀನು ಪ್ರತಿದಿನ ಕುಡಿದುಕೊಂಡು ಬಂದು ಸಾಕ್ಷಿ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಾಡುತ್ತಿರುವುದಲ್ಲದೇ, ಹೆಚ್ಚಿನ ವರದಕ್ಷಿಣೆ ಹಣವನ್ನು ತೆಗೆದುಕೊಂಡು ಬರುವಂತೆ ಮಾನಸಿಕ ಹಾಗೂ ದೈಹಿಕ ಹಿಂಸೆಯನ್ನು ನೀಡುತ್ತಿದ್ದು, ಆ ಪ್ರಕಾರ ಕಲಂ 498(ಎ) ಜೊತೆ 34 ರ ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

3. ಮೂರನೇಯದಾಗಿ, ತದನಂತರ ಸಾಕ್ಷಿ-1 ರವರು ನಿಮ್ಮ ಕಿರುಕುಳ ತಡೆಯಲಾರದೆ ತನ್ನ ತಾಯಿ ಸಾಕ್ಷಿ-8 ರವರ ಮನೆಗೆ ಬಂದು ಉಳಿದುಕೊಂಡಿದ್ದು, ಆ ಸಮಯದಲ್ಲಿ ಆಕೆ ಗರ್ಭಿಣಿಯಾಗಿದ್ದು, ಆ ಸಮಯದಲ್ಲಿ ದಿಃ 21-08-2023 ರಂದು ಬೆಳಿಗ್ಗೆ 11-45 ಗಂಟೆ ಸಮಯದಲ್ಲಿ 1 ನೇ ಆರೋಪಿತನಾದ ನೀನು ವಿದ್ಯಾನಗರಕ್ಕೆ ಹೋಗಿ ಸಾಕ್ಷಿ-1 ಮತ್ತು 8 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಾಡಿ, ತನ್ಮೂಲಕ ಸಾರ್ವಜನಿಕ ಶಾಂತತಾ ಭಂಗವನ್ನುಂಟುಮಾಡುವಂತೆ ಪ್ರಚೋದಿಸಿದ್ದು,ಆ ಪ್ರಕಾರ ಕಲಂ 504 ರ ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

4. ನಾಲ್ಕನೇಯದಾಗಿ, ಮೇಲೆ ಹೇಳಿದ ಸಮಯ, ದಿನ ಮತ್ತು ಸ್ಥಳದಲ್ಲಿ ಆರೋಪಿತರಾದ ನಿಮ್ಮಲ್ಲಿ 1 ನೇ ಆರೋಪಿಯಾದ ನೀನು ಸದರಿ ಮನೆಯ ಮುಂಬಾಗಿಲಿನ ಚಿಲಕ ಕಿತ್ತು ಹೋಗುವಂತೆ ಕಾಲಿನಿಂದ ಜಾಡಿಸಿ ಒದ್ದು, ಮನೆಯ ಒಳಗಡೆ ಅಕ್ರಮ ಪ್ರವೇಶ ಮಾಡಿದ್ದು, ಆ ಪ್ರಕಾರ ಕಲಂ 448 ರ ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

5. ಐದನೇಯದಾಗಿ, ಮೇಲೆ ಹೇಳಿದ ಸಮಯ, ದಿನ ಮತ್ತು ಸ್ಥಳದಲ್ಲಿ 1 ನೇ ಆರೋಪಿಯಾದ ನೀನು ಸಾಕ್ಷಿ-1 ರವರನ್ನು ಎಳೆದಾಡಿ, ಮೊಬೈಲ್ ನಿಂದ ಆಕೆಯ ತಲೆಗೆ, ಮುಖಕ್ಕೆ ಹಲ್ಲೆ ಮಾಡಿದ್ದು, ಆ ಪ್ರಕಾರ ಕಲಂ 324 ರ ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

6. ಆರನೇಯದಾಗಿ, ಮೇಲೆ ಹೇಳಿದ ಸಮಯ, ದಿನ ಮತ್ತು ಸ್ಥಳದಲ್ಲಿ 1 ನೇ ಆರೋಪಿಯಾದ ನೀನು ಸಾಕ್ಷಿ-1 ರವರನ್ನು ಎಳೆದಾಡಿ, ಮೊಬೈಲ್ ನಿಂದ ಆಕೆಯ ತಲೆಗೆ, ಮುಖಕ್ಕೆ ಹಲ್ಲೆ ಮಾಡಿದ್ದು, ಆ ಸಮಯದಲ್ಲಿ ಬಿಡಿಸಲು ಬಂದ ಸಾಕ್ಷಿ-8 ರವರಿಗೆ ಕೈಕಾಲುಗಳಿಂದ ಮೈಕೈಗೆ ಹೊಡೆದು ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು, ಆ ಪ್ರಕಾರ ಕಲಂ 323 ರ ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

7. ಏಳನೇಯದಾಗಿ, ಮೇಲೆ ಹೇಳಿದ ಸಮಯ, ದಿನ ಮತ್ತು ಸ್ಥಳದಲ್ಲಿ 1 ನೇ ಆರೋಪಿಯಾದ ನೀನು ಸಾಕ್ಷಿ-1 ರವರನ್ನು ಎಳೆದಾಡಿ, ಮೊಬೈಲ್ ನಿಂದ ಆಕೆಯ ತಲೆಗೆ, ಮುಖಕ್ಕೆ ಹಲ್ಲೆ ಮಾಡಿದ್ದು, ಆ ಸಮಯದಲ್ಲಿ ಬಿಡಿಸಲು ಬಂದ ಸಾಕ್ಷಿ-8 ರವರಿಗೆ ಕೈಕಾಲುಗಳಿಂದ ಮೈಕೈಗೆ ಹೊಡೆದು ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದಲ್ಲದೇ, ಅವರಿಬ್ಬರನ್ನು ಮನೆಯಿಂದ ಹೊರಗೆ ಎಳೆದುಕೊಂಡು ಬಂದು ದೂಡಾಡಿ ಅವರ ಮಾನಕ್ಕೆ ಕುಂದು ಬರುವ ರೀತಿಯಲ್ಲಿ ವರ್ತನೆ ಮಾಡಿದ್ದು, ಆ ಪ್ರಕಾರ ಕಲಂ 354 ರ ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

8. ಎಂಟನೇಯದಾಗಿ, ಮೇಲೆ ಹೇಳಿದ ಸಮಯ, ದಿನ ಮತ್ತು ಸ್ಥಳದಲ್ಲಿ 1 ನೇ ಆರೋಪಿಯಾದ ನೀನು ಸಾಕ್ಷಿ-1 ರವರನ್ನು ಎಳೆದಾಡಿ, ಮೊಬೈಲ್ ನಿಂದ ಆಕೆಯ ತಲೆಗೆ, ಮುಖಕ್ಕೆ ಹಲ್ಲೆ ಮಾಡಿದ್ದು, ಆ ಸಮಯದಲ್ಲಿ ಬಿಡಿಸಲು ಬಂದ ಸಾಕ್ಷಿ-8 ರವರಿಗೆ ಕೈಕಾಲುಗಳಿಂದ ಮೈಕೈಗೆ ಹೊಡೆದು ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯಪಡಿಸಿ, ಅವರಿಬ್ಬರನ್ನು ಮನೆಯಿಂದ ಹೊರಗೆ ಎಳೆದುಕೊಂಡು ಬಂದು ದೂಡಾಡಿ ಅವರ ಮಾನಕ್ಕೆ ಕುಂದು ಬರುವ ರೀತಿಯಲ್ಲಿ ವರ್ತನೆ ಮಾಡಿದ್ದಲ್ಲದೇ, ಆ ಸಮಯದಲ್ಲಿ ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ, ಕೊಲೆ ಮಾಡುತ್ತೇನೆ ಎಂದು ಜೀವ ಬೆದರಿಕೆ ಹಾಕಿದ್ದು, ಆ ಪ್ರಕಾರ ಕಲಂ 506 ರ ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

9. ಒಂಭತ್ತನೇಯದಾಗಿ, 1 ರಿಂದ 3 ನೇ ಆರೋಪಿತರಾದ ನೀವು ಸಾಕ್ಷಿ-1 ರವರನ್ನು ಮದುವೆ ಮಾಡಿಸಿಕೊಂಡು ಬಂದ ಬಳಿಕ ಆಕೆಯ ಬಳಿ ಹೆಚ್ಚಿನ ವರದಕ್ಷಿಣೆ ಹಣ ತರುವಂತೆ ಪೀಡಿಸುತ್ತಿದ್ದು, ಆ ಸಮಯದಲ್ಲಿ ಸಾಕ್ಷಿ-8 ರವರು 5 ಲಕ್ಷ ರೂಪಾಯಿ ಹಣ ಸಾಕ್ಷಿ-1 ರವರ ಮೂಲಕ ನೀಡಿದ್ದರೂ ಕೂಡ ಪುನಃ ಹೆಚ್ಚಿನ ವರದಕ್ಷಿಣೆ ತರಬೇಕೆಂದು ಪೀಡಿಸುತ್ತಿದ್ದು, ಆ ಪ್ರಕಾರ ಕಲಂ 4 ವರದಕ್ಷಿಣೆ ನಿಶೇಧ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

10. ಹತ್ತನೇಯದಾಗಿ, ಆರೋಪಿತರಾದ ನೀವು ಸಾಕ್ಷಿ-1 ರವರಿಂದ ಮದುವೆಯ ಸಮಯದಲ್ಲಿ ಹಾಗೂ ಮದುವೆಯಾದ ಬಳಿಕ ವರದಕ್ಷಿಣೆ ಹಣ ಹಾಗೂ ಹೆಚ್ಚಿನ ವರದಕ್ಷಿಣೆ ಹಣ ಪಡೆದುಕೊಂಡು ಸದರಿ ಹಣವನ್ನು ಆಕೆಯ ಖಾತೆಯಲ್ಲಿ ಇಡದೇ ಸ್ವಂತಕ್ಕಾಗಿ ಉಪಯೋಗಿಸಿಕೊಂಡಿದ್ದು, ಆ ಪ್ರಕಾರ ಕಲಂ 6 ವರದಕ್ಷಿಣೆ ನಿಶೇಧ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

11. ಹನ್ನೊಂದನೇಯದಾಗಿ, ಆರೋಪಿತರಾದ ನಿಮಗೆ ಸಾಕ್ಷಿ-1 ರವರು ಪರಿಶಿಷ್ಟ ಜಾತಿಯ ಚಿಲುವಾದಿ ಜನಾಂಗಕ್ಕೆ ಸೇರಿದವಳು ಎಂದು ತಿಳಿದಿದ್ದರೂ ಕೂಡ ನೀವೆಲ್ಲರೂ ಆಕೆಗೆ ಸಾರ್ವಜನಿಕವಾಗಿ ಕೀಳು ಜಾತಿಯವಳು, ಹೊಲೆಯರ ಚಿಲುವಾದಿ ಜಾತಿಗೆ ಸೇರಿದವಳು, ಅಡುಗೆ ಕೋಣೆಗೆ, ದೇವರ ಕೋಣೆಗೆ ಕಾಲಿಡಬೇಡ ಎಂದು ಜಾತಿ ನಿಂದನೆ ಮಾಡಿದ್ದು, ಆ ಪ್ರಕಾರ ಕಲಂ 3(1)(ಆರ್), 3(1)(ಎಸ್), ಎಸ್‌ಸಿ ಎಸ್ ಟಿ (ಪಿಒಎ) ಕಾಯ್ದೆ 1989 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀಯಾ.

12. ಹನ್ನೆರಡನೇಯದಾಗಿ, 1 ನೇ ಆರೋಪಿತನಾದ ನಿನಗೆ ಸಾಕ್ಷಿ-1 ರವರು ಪರಿಶಿಷ್ಟ ಜಾತಿಯ ಚಿಲುವಾದಿ ಜನಾಂಗಕ್ಕೆ ಸೇರಿದವಳು ಎಂದು ತಿಳಿದಿದ್ದರೂ ಕೂಡ ಆಕೆಗೆ ಕೈಗಳಿಂದ ಹಲ್ಲೆ ಮಾಡಿದ್ದಲ್ಲದೇ, ಆಕೆಯ ಮಾನಕ್ಕೆ ಕುಂದು ಬರುವ ರೀತಿಯಲ್ಲಿ ವರ್ತನೆ ಮಾಡಿದ್ದು, ಆ ಪ್ರಕಾರ ಕಲಂ 3(1)(ಡಬ್ಲ್ಯೂ) ಎಸ್‌ಸಿ ಎಸ್ ಟಿ (ಪಿಒಎ) ಕಾಯ್ದೆ 1989 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

13. ಕೊನೆಯದಾಗಿ, 1 ರಿಂದ 3 ನೇ ಆರೋಪಿತರಾದ ನಿಮಗ ಸಾಕ್ಷಿ-1 ರವರು ಪರಿಶಿಷ್ಟ ಜಾತಿಯ ಚಲುವಾದಿ ಜನಾಂಗಕ್ಕೆ ಸೇರಿದವಳು ಎಂದು ತಿಳಿದಿದ್ದರೂ ಕೂಡ ಆಕೆಯ ಜಾತಿಯ ಕುರಿತಾಗಿ ನಿಂದನೆ ಮಾಡಿದ್ದಲ್ಲದೇ, ಆಕೆಗೆ ಕೈಗಳಿಂದ ಹಲ್ಲೆ ಮಾಡಿದ್ದಲ್ಲದೇ, ಆಕೆಯ ಮಾನಕ್ಕೆ ಕುಂದು ಬರುವ ರೀತಿಯಲ್ಲಿ ವರ್ತನೆ ಮಾಡಿದ್ದು, ಆ ಪ್ರಕಾರ ಕಲಂ 3(2)(ವಿ-ಎ) ಎಸ್‌ಸಿ ಎಸ್ ಟಿ (ಪಿಒಎ) ಕಾಯ್ದೆ 1989 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

14. ಇಂದು 13 ನೇ ತಾರೀಖು ಆಗಸ್ಟ್ ಮಾಹೆ 2024

(ಈ ಮೇಲಿನ ದೋಷಾರೋಪಣೆಯನ್ನು ಆರೋಪಿತನಿಗೆ ಓದಿ, ತಿಳಿಸಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮ ತೆಗೆದುಕೊಳ್ಳಲಾಯಿತು)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ದಾವಣಗೆರೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ , ದಾವಣಗೆರೆ.

Spl.C.723/2023

ಫಿರ್ಯಾದಿದಾರರು	ವಿರುದ್ಧ	ಆರೋಪಿತರು
ರಾಜ್ಯದ ಪರವಾಗಿ ಹರಿಹರ ನಗರ ಪೊಲೀಸ್ ಠಾಣೆ, ಹರಿಹರ.		ಎ 1) ವಿನಯಕುಮಾರ.ಕೆ.ಎನ್. ಮತ್ತು ಇತರರು

ಆರೋಪಿತರ ಹೇಳಿಕೆ

ಪ್ರಶ್ನೆ 1 – ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೆ?

ಉತ್ತರ -

ಪ್ರಶ್ನೆ 2 – ನೀನು ತಪ್ಪನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ -

(ಆರೋಪಿ ಹೇಳಿಕೆಯನ್ನು ಆತನ ಹೇಳಿಕೆ ಮೇರೆಗೆ ಮತ್ತು ನನ್ನ ಸಮಕ್ಷಮದಲ್ಲಿ ತೆಗೆದುಕೊಳ್ಳಲಾಯಿತು.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ದಾವಣಗೆರೆ.

ದಿನಾಂಕ. 13-08-2024

ಆರೋಪಿತರ ಹೆಸರು	ಆರೋಪಿತರ ಸಹಿ
ಎ 1) ವಿನಯಕುಮಾರ.ಕೆ.ಎನ್. ತಂದೆ ಕೆ.ಹೆಚ್.ಮೋಹನ್,	
ಎ 2) ರತ್ನಮ್ಮ ಕೋಂ ಕೆ.ಹೆಚ್.ಮೋಹನ,	
ಎ 3) ಬಸಮ್ಮ ಯಾನೆ ನೀಲಮ್ಮ ಕೋಂ ಲಕ್ಷ್ಮಣ ಅರಳಿಕಟ್ಟೆ,	